ದಿನಾಂಕ 26-12-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ 2ನೇ ಎದುರುದಾರರ ಪರ ವಕೀಲರಿಂದಃ-

2. ಈ ಕೇಸಿನಲ್ಲಿ ನಾನು ಭಾಗಶಃ ತನಿಖೆ ಮಾಡಿರುತ್ತೇನೆ. ದಿನಾಂಕ 02.05.2023ರಂದು ಕೇಸಿನ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿ, ಅಪಘಾತಕ್ಕೀಡಾದ ವಾಹನವನ್ನು ಐ.ಎಂ.ವಿ. ತಪಾಸಣೆ ಮಾಡಲು ಆರ್.ಟಿ.ಓ.,ಗೆ ಮನವಿ ಸಲ್ಲಿಸಿಕೊಂಡು, ನಂತರ ಪ್ರಕರಣದಲ್ಲಿ ಶಜೀನ್.ಟಿ ಬಿನ್ ಅಪ್ಪುನಾಯಕ್, 45 ವರ್ಷ, ಡ್ರೈವರ್ ಕೆಲಸ, ತಾಳೆನಾರಂತ್ ಗ್ರಾಮ, ಕುರುವಟ್ಟೂರು ಅಂಚೆ, ಕ್ಯಾಲಿಕಟ್ ಜಿಲ್ಲೆ, ಕೇರಳ ರಾಜ್ಯ ಇವರು ಕಛೇರಿಗೆ ಹಾಜರಾಗಿ ನೀಡಿದ ಸ್ವಇಚ್ಛಾ ಹೇಳಿಕೆ ಪಡೆದುಕೊಂಡು, ಆತನ ದಸ್ತಗಿರಿ ಕ್ರಮ ಜರುಗಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಕೆಎಲ್-15-ಎ-1988 ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಇಂಡೆಮ್ನಿಟಿ ಬಾಂಡ್ ಪಡೆದು ಮಾಲೀಕರ ವಶಕ್ಕೆ ನೀಡಿರುತ್ತೇನೆ. ದಿನಾಂಕ 18.05.2023ರಂದು ಆರ್.ಟಿ.ಓ ಅಧಿಕಾರಿಗಳಿಂದ ಐ.ಎಂ.ವಿ ವರದಿ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತ ಪರಮೇಶ್ವರ್ ರವರ ಪಿ.ಎಂ ವರದಿ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ದಿನಾಂಕ 26.06.2023ರಂದು ಕೆಎ-04-ಕೆಎನ್-2576 ದ್ವಿಚಕ್ರ ವಾಹನವನ್ನು ಮಾಲೀಕರಾದ ವಿತ್ತೇಶ್ ರವರಿಗೆ ಐ.ಎಂ.ವಿ ಕಾಯ್ದೆ ಕಲಂ 133ರಡಿ ನೋಟಿಸ್ ನೀಡಿ, ವಾಹನದ ಮಾಲೀಕರಿಂದ ಇಂಡೆಮ್ನಿಟಿ ಬಾಂಡ್ ಪಡೆದು ವಾಹನವನ್ನು ಮಾಲೀಕರ ವಶಕ್ಕೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 16.08.2023ರಂದು ಪ್ರಕರಣದ ಗಾಯಾಳು ಮಂಜುಗೌಡ ರವರ ಗಾಯದ ಪ್ರಮಾಣಪತ್ರವನ್ನು ಸಾರ್ವಜನಿಕ ಆಸ್ಪತ್ರೆ, ಮದ್ದೂರು ಇಲ್ಲಿಂದ ಪಡೆದು, ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಪೊಲೀಸ್ ದಾಖಲೆ ಪ್ರಕಾರ ಮುಂದೆ ಹೋಗುತ್ತಿದ್ದ ಬಸ್ಸಿಗೆ ಹಿಂಬದಿಯಿಂದ ಬಂದು ಬಸ್ಸಿನ ಎಡಬದಿಗೆ ದ್ವಿಚಕ್ರ

ವಾಹನದ ಸವಾರ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

(ಶ್ರೀ ಜೆ.ಎಸ್., ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಜೆ.ಎಸ್., ವಕೀಲರಿಂದಃ-

ಕೃತ್ಯ ನಡೆದ ಸ್ಥಳದ ಸ್ಕೆಚ್‌ನ ಪ್ರಕಾರ ಅಪಘಾತ ಆಗಿರುವುದು ರಸ್ತೆಯ ಪೂರ್ತಿ ಎಡಭಾಗದಲ್ಲಿ ಎಂದರೆ ಸರಿ. ದ್ವಿಚಕ್ರ ವಾಹನದ ಮಾಲೀಕರಿಗೆ ಐ.ಎಂ.ವಿ ಕಾಯ್ದೆ ಕಲಂ 133ರಡಿ ನೀಡಿದ ನೋಟಿಸ್‌ಗೆ ಉತ್ತರ ಕೊಟ್ಟಿದ್ದಾರಾ ಎಂದರೆ ನೆನಪಿಲ್ಲ. ದ್ವಿಚಕ್ರ ವಾಹನದ ಸವಾರನಿಗೆ ಡಿ.ಎಲ್ ಇರಲಿಲ್ಲ, ಆದ ಕಾರಣ ವಾಹನದ ಮಾಲೀಕ ನೋಟಿಸ್‌ಗೆ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಸವಾರ ಮತ್ತು ಗಾಯಾಳು ಅಪಘಾತದ ಕಾಲಕ್ಕೆ ಹೆಲ್ಮೆಟ್ ಧರಿಸಿದ್ದರಾ, ಇಲ್ಲವಾ ಎಂದು ದೂರಿನಲ್ಲಿ ಹಾಗೂ ಪೊಲೀಸ್ ದಾಖಲೆಗಳಲ್ಲೂ ಸಹ ನಮೂದು ಇಲ್ಲ. ಹೆಲ್ಮೆಟ್ ಹಾಕಿರಲಿಲ್ಲ ಎಂದು ದೋಷಾರೋಪಣಾ ಪತ್ರದಲ್ಲಿ ತೋರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ದೂರಿನಲ್ಲಿ ಆ ರೀತಿ ಇರಲಿಲ್ಲ ಎಂದು ನುಡಿಯುತ್ತಾರೆ. ಐ.ಎಂ.ವಿ ಕಾಯ್ದೆ ಕಲಂ 156ರ ಪ್ರಕಾರ ಅಪಘಾತದ ಬಗ್ಗೆ ವಿಮಾ ಕಂಪನಿಗೆ ಮಾಹಿತಿ ನೀಡಿಲ್ಲ. ಪೊಲೀಸ್ ದಾಖಲೆಗಳ ಪ್ರಕಾರ ಅಪಘಾತ ಆಗಿರುವುದು ದ್ವಿಚಕ್ರ ವಾಹನದ ಸವಾರನ ತಪ್ಪಿನಿಂದಲೇ, ಆದರೆ ಅರ್ಜಿದಾರರಿಗೆ ಪರಿಹಾರ ಕೊಡಿಸಬೇಕೆಂದು ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ.ಬಿ.ಎಸ್., ವಕೀಲರಿಂದಃ-

ದ್ವಿಚಕ್ರ ವಾಹನದ ಮಾಲೀಕರು ಐ.ಎಂ.ವಿ ಕಾಯ್ದೆ 133ರ ನೋಟಿಸ್‌ಗೆ ರಿಪ್ಲೈ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕೇಸಿನ ಕಡತವನ್ನು ನೋಡಿ ಕೊಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ರಿಪ್ಲೈಯನ್ನು ನಿಪಿ-15 ಎಂದು

ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.